<u>ದಿಃ06.03.2024 OS No. 215/2020 PW-1</u>

ದಿಃ06.03.2024 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ.ಹೆಚ್.ಎಸ್.ಹೆಚ್. ವಕೀಲರಿಂದ</u>

ನಾನು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮಾತ್ರ ಬರುತ್ತದೆ ಬರೆಯಲು ಅಷ್ಟೊಂದು ಬರುವುದಿಲ್ಲ. 1ನೇ ಪ್ರತಿವಾದಿಯು ನನ್ನ ದೊಡ್ಡಪ್ಪನ ಮಗ ಆಗಿರುತ್ತಾರೆ. ಪ್ರತಿವಾದಿ 2 ರಿಂದ 4 ರವರು 1ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು ಆಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ 5 ರಿಂದ 7 ರವರು 1ನೇ ಪ್ರತಿವಾದಿಯ ತಮ್ಮನ ಹೆಂಡತಿ ಮತ್ತು ಮಕ್ಕಳಾಗಿರುತ್ತಾರೆ. ಮರೀಗೌಡ ಎಂದರೆ ನನ್ನ ತಂದೆ ಆಗಿರುತ್ತಾರೆ. ಚನ್ನೇಗೌಡ ಎಂದರೆ ನನ್ನ ತಂದೆಯ ತಮ್ಮ ಆಗಿರುತ್ತಾರೆ. ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಆಗಿದ್ದು ಅದರ ಖಾತೆಯು 1ನೇ ಪ್ರತಿವಾದಿ, 5ನೇ ಪ್ರತಿವಾದಿ, ಮರೀಗೌಡ ಮತ್ತು ಚನ್ನೇಗೌಡರ ಹೆಸರಿಗೆ ಜಂಟಿ ಇರುತ್ತದೆ ಎಂದರೆ ಸರಿ. ಒಟ್ಟು ಕುಟುಂಬದಲ್ಲಿ ಇದ್ದಾಗ ಮನೆಯ ವ್ಯವಹಾರವನ್ನು ನನ್ನ ತಂದೆಯು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆಯು ಎರಡು ವರ್ಷಗಳ ಹಿಂದೆ ಮೃತರಾಗಿರುತ್ತಾರೆ.

ನನ್ನ ತಂದೆಯು ದಾವಾ ಸ್ವತ್ತನ್ನು ವಿಭಾಗ ಮಾಡಿ ಪೋಡಿ ಮಾಡಿಸಿರಲಿಲ್ಲ ಎಂದರೆ ಅವರು ಮಾಡಿಸಿಕೊಳ್ಳಬೇಕಾಗಿತ್ತು. ಆದರೆ ಮಾಡಿಸಿರುವುದಿಲ್ಲ. ಕ್ರಯದ ಮಾತುಕತೆಗೆ ನಾನು, ನನ್ನ ಕುಟುಂಬ, 1ನೇ ಪ್ರತಿವಾದಿ ಮತ್ತು ಅವರ ಕುಟುಂಬ, ಅಂಕರಾಜು, ನನ್ನ ತಂದೆ ತಾಯಿ ಮತ್ತು ನನ್ನ ತಮ್ಮ ಪುಟ್ಟರಾಜು ಸೇರಿದ್ದೆವು. 2ಲಕ್ಷ ರೂಪಾಯಿಗಳಿಗೆ ಕ್ರಯದ ಮಾತುಕತೆ ಆಗಿರುತ್ತದೆ. ಮಾತುಕತೆ ಆದ ದಿನಾಂಕ ನನಗೆ ಗೊತ್ತಿರುವುದಿಲ್ಲ. ದಿಃ16.02.2015 ರಂದು ಕ್ರಯದ ಕರಾರು ನೋಂದಣಿ

ಆಗಿರುತ್ತದೆ. ಸದರಿ ಕಾಲಕ್ಕೆ ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಎಷ್ಟಿತ್ತು ಎಂದು ತಿಳಿದುಕೊಂಡಿರುವುದಿಲ್ಲ. ಸದರಿ ಕಾಲಕ್ಕೆ ದಾವಾ ಸ್ವತ್ತಿನ ಮೌಲ್ಯ 10 ಲಕ್ಷರೂಪಾಯಿ ಇತ್ತು ಎಂದರೆ ನಾನು ಆ ಬಗ್ಗೆ ತಿಳಿದುಕೊಂಡಿರುವುದಿಲ್ಲ.

ಪ್ರತಿವಾದಿಗಳು ನನ್ನ ಬಳಿ ಮದುವೆಗೆಂದು ಸಾಲ ಮಾತ್ರ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯು ಮನೆಯ ವ್ಯವಹಾರ ಮಾಡುತ್ತಿದ್ದ ಕಾರಣ ಮತ್ತು ದಾವಾ ಸ್ವತ್ತು ಪೋಡಿಯಾಗದ ಕಾರಣ ಅದು ನೊಂದಣಿ ಆಗುವುದಿಲ್ಲ ವೆಂದು ನಮಗೆ ಗೊತ್ತಿತ್ತು ಆದ್ದರಿಂದ ಪ್ರತಿವಾದಿಗಳಿಗೆ ಸಾಲ ನೀಡಿ ಅದರ ಭದ್ರತೆಗಾಗಿ ದಾಖಲೆಯನ್ನು ಬರೆಸಿಕೊಂಡಿದ್ದೆವು ಎಂದರೆ ಸರಿಯಲ್ಲ. ಆ ದಿನ ಛಾಪಾಕಾಗದವನ್ನು 1 ನೇ ಪ್ರತಿವಾದಿಯೇ ತಂದಿರುತ್ತಾರೆ. ಛಾಪಾಕಾಗದವನ್ನು ಯಾರು ಖರೀದಿ ಮಾಡುತ್ತಾರೆ ಅವರ ಹೆಸರನ್ನು ಛಾಪಾಕಾಗದಲ್ಲಿ ಬರೆಯುತ್ತಾರೆ ಎಂದರೆ ಸರಿ. ನಾನು ಸದರಿ ಪತ್ರವನ್ನು ಖರೀದಿ ಮಾಡಿದ ಬಗ್ಗೆ ನಮೂದಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯು ಕರಾರು ಆಗುವ ಸಮಯದಲ್ಲಿ ಬರದೇ ಇದ್ದ ಕಾರಣ ನಿಪಿ.1 ಕ್ಕೆ ಅವರು ಸಹಿ ಮಾಡಿರುವುದಿಲ್ಲ. ಜಿ.ಎಂ. ಪುಟ್ಟರಾಜು ಎಂದರೆ ನನ್ನ ತಮ್ಮ ಆಗಿರುತ್ತಾರೆ. ಅಂಕರಾಜು ಎಂದರೆ ಊರಿನ ಯಜಮಾನ ಆಗಿರುತ್ತಾರೆ. ಪ್ರತಿವಾದಿಗಳು ಸಾಲದ ಭದ್ರತೆಗಾಗಿ ನಿಪಿ.1 ಅನ್ನು ಬರೆದುಕೊಟ್ಟಿದ್ದು ಅವರು ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ಒಪ್ಪಿಕೊಂಡಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಮತ್ತು ನನ್ನ ಚಿಕ್ಕಪ್ಪ ಚನ್ನೇಗೌಡರನ್ನು ಈ ದಾವೆಯಲ್‌ಲ್ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾ ಸ್ವತ್ತಿಗೆ ಚಕ್ಕುಬಂಧಿ ಪೂರ್ವಕ್ಕೆ ವೆಂಕಟಮ್ಮರವರ ಮರೀಗೌಡರ ರ ಸ್ವತ್ತು, ಪಶ್ಚಿಮಕ್ಕೆ ಮರೀಗೌಡರ ರ ಸ್ವತ್ತು, ಉತ್ತರಕ್ಕೆ ಚನ್ನಪ್ಪನ ಸ್ವತ್ತು ಮತ್ತು

ದಕ್ಷಿಣಕ್ಕೆ ಹೇಮಲತಾ ರವರ ಸ್ವತ್ತು ಇರುತ್ತದೆ. ನಾನು ದಾವಾ ಸ್ವತ್ತಿನ ಮಾಲೀಕಳು ಎಂದು ವಿದ್ಯುತ್ ಚ್ಛಕ್ತಿ ಇಲಾಖೆಯಿಂದ ಬಂದ ಸಹಾಯವನ್ನು ನಾನು ಪಡೆದಿರುವುದಿಲ್ಲ, ಅದನ್ನು 1 ನೇ ಪ್ರತಿವಾದಿಯೇ ನನಗೆ ಕೊಡಿಸಿರುತ್ತಾರೆ. ತಲಾ 35 ಸಾವಿರಗಳಂತೆ ಎರಡು ಚೆಕ್ಕುಗಳನ್ನು ನನಗೆ ಕೊಡಿಸಿರುತ್ತಾರೆ. ಸಾಲ ತೀರುವಳಿ ಮಾಡುವ ಉದ್ದೇಶದಿಂದ ಸದರಿ ಚೆಕ್ಕುಗಳನ್ನು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಉಳಿಕೆ 50 ಸಾವಿರಗಳನ್ನು ನನಗೆ ನೀಡಿದ್ದು ಆದರೂ ಸಹ ನಾನು ದುರ್ಲಾಭ ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಓದಲು ಬರದ ಕಾರಣ ನಾನೇ ನಿಪಿ.1 ಅನ್ನು ತಯಾರು ಮಾಡಿಸಿ ಅವರ ಸಹಿಯನ್ನು ಮೋಸದಿಂದ ಪಡೆದಿದ್ದು ಅವರು ನೋಂದಣಿ ಕಚೇರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶದಿಂದ ಪ್ರತಿವಾದಿಗಳು ನನಗೆ ಯಾವುದೇ ಕರಾರನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಾಲದ ಮೊತ್ತವನ್ನು ಈಗಾಗಲೀ ತೀರುವಳಿ ಮಾಡಿರುವುದರಿಂದ ನಾನು ದಾವಾ ಸ್ವತ್ತನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ:05.02.2018 ಮತ್ತು 26.02.2018 ರಂದು 1 ನೇ ಪ್ರತಿವಾದಿಯು ಈ ಮೇಲೆ ಹೇಳಿದಂತೆ ವಿದ್ಯುತ್ ಚ್ಛಕ್ತಿ ಇಲಾಖೆಯ ಎರಡು ಚೆಕ್ಕುಗಳನ್ನು ನನಗೆ ಕೊಟ್ಟಿರುತ್ತಾರೆ. ಆ ರೀತಿ ಎರಡು ಚೆಕ್ಕುಗಳನ್ನು ನನಗೆ ಕೊಟ್ಟ ಬಗ್ಗೆ ನೋಟೀಸಿನಲ್ಲಿ ಹೇಳಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.